ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು):-

ಅ) ಧಾರವಾಡ ಬೆಳವಣಿಗೆ ಕೇಂದ್ರದಲ್ಲಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದ್ದು, ಇಲ್ಲಿ ಕೈಗಾರಿಕೆಗಳು ಸ್ಥಾಪಿತವಾಗುತ್ತಿವೆ.

ಈ ಕೇಂದ್ರವನ್ನು ಒಟ್ಟು 2205 ಎಕರೆ ಪ್ರದೇಶದಲ್ಲಿ ಒಟ್ಟು ರೂ. 61.29 ಕೋಟಿಗಳ ವೆಚ್ಚದಲ್ಲಿ ಕೆಐಎಡಿಬಿ.ಯ ಮುಖಾಂತರ ಸ್ಥಾಪಿಸಲಾಗುತ್ತಿದೆ. ಇದನ್ನು ನಾಲ್ಕು ಹಂತಗಳಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದ್ದು, ಮೊದಲನೇ ಹಂತದಲ್ಲಿ 500 ಎಕರೆಗಳಲ್ಲಿ ಬಹುತೇಕ ಮೂಲಭೂತ ಸೌಕರ್ಯಗಳೊಂದಿಗೆ ಅಭಿವೃದ್ಧಿಪಡಿಸಿದ್ದು, 315 ಎಕರೆ ಭೂಮಿಯನ್ನು 152 ಕೈಗಾರಿಕಾ ಘಟಕಗಳಿಗೆ ವಿತರಿಸಿದ್ದು, ಇದರಲ್ಲಿ ಬಹಳಷ್ಟು ಘಟಕಗಳು ಕೈಗಾರಿಕೆಗಳನ್ನು ಸ್ಥಾಪಿಸಿವೆ : ಸ್ಥಾಪಿಸುವ ಹಂತದಲ್ಲಿವೆ.

1ನೇ ಫೇಸ್‌ನ ಎರಡನೇ ಹಂತದಲ್ಲಿ 812 ಎಕರೆಗಳಷ್ಟು ಜಮೀನನ್ನು ಅಭಿವೃದ್ಧಿಗೋಸ್ಕರ ಕೈಗೆತ್ತಿಕೊಂಡಿದ್ದು, ಇದರ ಕಾರ್ಯ ಶೀಘ್ರದಲ್ಲಿಯೇ ಪೂರ್ಣಗೊಳ್ಳಲಿದೆ. ಇದರಲ್ಲಿ 200 ಎಕರೆಯಷ್ಟು ಭೂಮಿಯನ್ನು ಎಲೆಕ್ಟ್ರಾನಿಕ್ ನಗರವಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ.

2ನೇ ಫೇಸ್‌ನಲ್ಲಿ 650 ಎಕರೆ ಭೂಮಿಯನ್ನು ಬೃಹತ್ ಕೈಗಾರಿಕೆಗಳಿಗೆ ಮೀಸಲಿರಿಸಲಾಗಿದೆ.

3ನೇ ಫೇಸ್‌ನಲ್ಲಿ ಕೈಗಾರಿಕಾ ವಸತಿಗಾಗಿ ಕ್ರಮ ಕೈಗೊಳ್ಳಲಾಗುವುದು.

ಹೀಗೆ ಉದ್ದೇಶಿತ ವಿಸ್ತೀರ್ಣದಲ್ಲಿ ಹಂತ ಹಂತವಾಗಿ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ ಮತ್ತು ಈ ಕಾರ್ಯ ಪ್ರಗತಿಯಲ್ಲಿದೆ.

ಇದಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ರೂ. 13.40 ಕೋಟಿ ಬಿಡುಗಡೆ ಮಾಡಿವೆ.

ವಿಷಯ:- ಮಹಾನಗರ ಪಾಲಿಕೆಯಿಂದ ಮತ್ತೊಂದು ನಗರ ಪಾಲಿಕೆಗೆ ನೌಕರರ ವರ್ಗಾವಣೆ.

1370 (875) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಮಹಾನಗರ ಪಾಲಿಕೆಗಳಲ್ಲಿಯ ಅಧಿಕಾರಿಗಳಿಗೆ ಮತ್ತು ನೌಕರದಾರರಿಗೆ ಹೆಚ್ಚಿನ ಸೇವಾ ದಕ್ಷತೆ ಮೂಡಿಸುವ ದೃಷ್ಟಿಯಿಂದ ಒಂದು ಮಹಾನಗರ ಪಾಲಿಕೆಯಿಂದ ಇನ್ನೊಂದು ಮಹಾನಗರ ಪಾಲಿಕೆಗೆ ವರ್ಗಾವಣೆ ಮಾಡುವ ವಿಚಾರವು ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.